ಎ)

1. ಮೂಲಸ್ಥಾವರದಿಂದ ಸ್ಥಳವನ್ನು ಗುತ್ತಿಗೆದಾರರಿಗೆ 8 ತಿಂಗಳ ತಡವಾಗಿ ನೀಡಲಾಗಿದೆ. ಇದು ಸರ್ಕಾರಿ ಜಮೀನನ್ನು ಕಂದಾಯ ಇಲಾಖೆಯಿಂದ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಹಸ್ತಾಂತರಿಸುವಲ್ಲಿ ಆದ ವಿಳಂಬ.
2. ಮೂಲಸ್ಥಾವರದಲ್ಲಿ ಕಚ್ಚಾ ನೀರಿನ ಏರು ಕೊಳವೆಯನ್ನು ಅಳವಡಿಸುವ ಸಂದರ್ಭದಲ್ಲಿ, ತಮ್ಮ ಗ್ರಾಮಕ್ಕೂ ಸಹ ನೀರು ಕೊಡಬೇಕೆಂದು ಕೋರಿ ಬೆಳಗೊಳ ಗ್ರಾಮದವರು 570 ಮೀ. ಉದ್ದ ಕೊಳವೆ ಮಾರ್ಗ ಅಳವಡಿಸುವ ಕಾಮಗಾರಿಯನ್ನು ಸ್ಥಗಿತಗೊಳಿಸಿರುತ್ತಾರೆ. ಹಾಗೂ ಇದು ವರೆಗೂ ಈ ಸಮಸ್ಯೆಗಳಿಗೆ ಪರಿಹಾರ ದೊರೆತಿರುವುದಿಲ್ಲ.
3. 11 ಕೆ.ವಿ ಎಕ್ಸ್‌ಪ್ರೆಸ್ ಫೀಡರ್ ಮೈನ್ ಅಳವಡಿಸಲು ಈವರೆಗೂ CHESCOM ವತಿಯಿಂದ ಅನುಮತಿ ದೊರೆತಿರುವುದಿಲ್ಲ.
4. ಸದರಿ ಯೋಜನೆಗೆ ಇದುವರೆವಿಗೂ ರೂ. 1250.00 ಲಕ್ಷಗಳು ಆರ್.ಡಿ.ಪಿ.ಆರ್ ವತಿಯಿಂದ ಮಂಡಳಿಗೆ ಬಿಡುಗಡೆಯಾಗಿದ್ದು, ರೂ.2776.00 ಲಕ್ಷಗಳ ಯೋಜನೆಯ ಪರಿಷ್ಕೃತ ಅಂದಾಜನ್ನು ತಯಾರಿಸಿ ಸರ್ಕಾರಕ್ಕೆ ಈ ಕಛೇರಿ ಪತ್ರ ಸಂಖ್ಯೆ: 946, ದಿನಾಂಕ: 10.07.2009 ರಲ್ಲಿ ಆಡಳಿತಾತ್ಮಕ ಅನುಮೋದನೆಗಾಗಿ ಸಲ್ಲಿಸಲಾಗಿದೆ. ಯೋಜನೆಯ ಉಳಿಕೆ ಹಣ ರೂ.1526.00 ಲಕ್ಷಗಳು ಬಿಡುಗಡೆಯಾದ ನಂತರ ಕಾಮಗಾರಿಗಳನ್ನು ಪೂರ್ಣಗೊಳಿಸಿ ಯೋಜನೆಯನ್ನು ಚಾಲನೆ ಗೊಳಿಸಲಾಗುವುದು.

ಮೈಸೂರು ಮಂಡಕಳ್ಳಿಯಲ್ಲಿ ವಿಮಾನ ಹಾರಾಟ ಆರಂಭಿಸುವ ಕುರಿತು

229 (7) ಶ್ರೀ ಸತ್ಯನಾರಾಯಣ ಎಂ. (ಚಾಮುಂಡೇಶ್ವರಿ) : ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ರೈತರಿಂದ ಎಷ್ಟು ಎಕರೆ ಜಮೀನನ್ನು ಭೂಸ್ವಾಧೀನಪಡಿಸಿ ಕೊಳ್ಳಲಾಗಿದೆ;

ಆ) ಸ್ವಾಧೀನಪಡಿಸಿಕೊಂಡಿರುವ ಜಮೀನುಗಳಿಗೆ ಪ್ರತಿ ಎಕರೆಗೆ ಎಷ್ಟು ಪರಿಹಾರದ ಮೊತ್ತವನ್ನು ನೀಡಲಾಗಿದೆ;

ಇ) ಭೂಸ್ವಾಧೀನಪಡಿಸಿಕೊಂಡಿರುವ ಎಲ್ಲಾ ರೈತರ ಜಮೀನುಗಳಿಗೆ ಭೂ ಪರಿಹಾರದ ಮೊತ್ತವನ್ನು ನೀಡಲಾಗಿದೆಯೇ ಹಾಗೂ ಈ ಭೂ ಪರಿಹಾರ ನೀಡುವುದು ಯಾವುದಾದರೂ ಬಾಕಿ ಇದೆಯೇ (ಮಾಹಿತಿ ನೀಡುವುದು);

ಈ) ಮೈಸೂರು ಮಂಡಕಳ್ಳಿ ವಿಮಾನ ನಿಲ್ದಾಣ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದ್ದರೂ ವಿಮಾನ ಹಾರಾಟ ಆರಂಭವಾಗಿಲ್ಲ ದಿರುವುದಕ್ಕೆ ಕಾರಣಗಳೇನು; ವಿಮಾನ ಹಾರಾಟವನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಜನಾರ್ಧನ ರೆಡ್ಡಿ (ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು) :

ಅ) ವಿಮಾನ ನಿಲ್ದಾಣದ ಮೊದಲನೇ ಹಂತಕ್ಕೆ ಒಟ್ಟು 150.38 ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ.

ವಿಮಾನ ನಿಲ್ದಾಣದ ಎರಡನೇ ಹಂತಕ್ಕೆ ಒಟ್ಟು 207.25 ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ.

ಆ) ವಿಮಾನ ನಿಲ್ದಾಣದ ಮೊದಲನೇ ಹಂತಕ್ಕಾಗಿ ಭೂ ಸ್ವಾಧೀನ ಪಡಿಸಿಕೊಂಡಿರುವ ಜಮೀನಿನ ವಿವರ ಹಾಗೂ ಪರಿಹಾರ ಪಾವತಿಯ ಮೊತ್ತ ಈ ಕೆಳಕಂಡಂತಿದೆ:

(ಲಕ್ಷ ರೂ. ಗಳಲ್ಲಿ)

ಕ್ರ.ಸಂ.	ಸ್ವಾಧೀನಪಡಿಸಿಕೊಂಡ ಜಮೀನು	ದರ (ಪ್ರತಿ ಎಕರೆಗೆ)	ಪರಿಹಾರದ ಮೊತ್ತ
1	114.09 ಎಕರೆ	6.50	742.46
2	36.29 ಎಕರೆ	7.00	30.07
3	6.37[1/2] ಎಕರೆ	50.00	347.18

ಎರಡನೇ ಹಂತದ ವಿಸ್ತರಣೆಗಾಗಿ ಸ್ವಾಧೀನ ಪಡಿಸಿಕೊಂಡಿರುವ ಜಮೀನಿಗೆ ಯಾವುದೇ ಪರಿಹಾರ ಪಾವತಿಸಿರುವುದಿಲ್ಲ.

ಇ) ವಿಮಾನ ನಿಲ್ದಾಣದ ಮೊದಲನೇ ಹಂತದ ಅಭಿವೃದ್ಧಿಗಾಗಿ ಸ್ವಾಧೀನಪಡಿಸಿಕೊಂಡ $234.37^{1/4}$ ಎಕರೆ ಜಮೀನಿನ ಪೈಕಿ $157.35^{1/4}$ ಎಕರೆಗೆ ಪರಿಹಾರದ ಮೊತ್ತವನ್ನು ಈಗಾಗಲೇ ಪಾವತಿಸಲಾಗಿದೆ. ಎರಡನೇ ಹಂತದ ವಿಸ್ತರಣೆಗಾಗಿ ಸ್ವಾಧೀನಪಡಿಸಿಕೊಂಡಿರುವ ಜಮೀನಿಗೆ ಪರಿಹಾರ ನೀಡಿಕೆ ಪರಿಶೀಲನೆಯಲ್ಲಿದೆ.

ಈ) ಈ ವಿಮಾನ ನಿಲ್ದಾಣದಲ್ಲಿ ವಿಮಾನದ ಹಾರಾಟಕ್ಕೆ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದಿಂದ ಅನುಮೋದನೆ ಬಾಕಿ ಇದೆ. ಅನುಮೋದನೆ ದೊರೆತ ನಂತರ ವಿಮಾನ ಹಾರಾಟವನ್ನು ಪ್ರಾರಂಭಿಸ ಲಾಗುವುದು. ಈ ಸಂಬಂಧ ರಾಜ್ಯ ಸರ್ಕಾರವು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರಕ್ಕೆ ಪತ್ರವನ್ನು ಬರೆದಿರುತ್ತದೆ.

ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರು ಸರಬರಾಜು

230 (10) ಶ್ರೀ ಸತ್ಯನಾರಾಯಣ ಎಂ. (ಚಾಮುಂಡೇಶ್ವರಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರು ಸರಬರಾಜು ಯೋಜನೆಗಳು ಇದ್ದಕ್ಕಿದ್ದಂತೆಯೇ ವಿಫಲವಾದಾಗ ತಕ್ಷಣವೇ ಬೇರೊಂದು ಯೋಜನೆಗೆ ಅನುಮೋದನೆ ಪಡೆಯುವವರೆಗೆ ತಾತ್ಕಾಲಿಕವಾಗಿ ವಿದ್ಯುತ್ ಸಂಪರ್ಕ ಕಲ್ಪಿಸಿ ಕುಡಿಯುವ ನೀರೊದಗಿಸುವಂತಹ ಯೋಜನೆಗಳಿಗೆ ಚೆಸ್ಕಾಂ ಜಾಗೃತ ದಳದವರು ದಂಡ ವಿಧಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಎಷ್ಟು ಪ್ರಕರಣಗಳು ಬೆಳಕಿಗೆ ಬಂದಿವೆ? ಮಾಹಿತಿಯನ್ನು ನೀಡುವುದು? (ಕ್ಷೇತ್ರವಾರು ಮಾಹಿತಿಯನ್ನು ನೀಡುವುದು);

ಇ) ವಿದ್ಯುತ್ ಸಮಸ್ಯೆಯಿಂದಾಗಿ ಇತ್ತೀಚೆಗೆ ಗ್ರಾಮೀಣ ಭಾಗದ ರೈತರಿಗೆ, ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಕುಡಿಯುವ ನೀರಿಗೂ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಸರ್ಕಾರವು ಕೊಟ್ಟ ಭರವಸೆಯಂತೆ ಈ ಸಮಸ್ಯೆ ನಿವಾರಣೆಗಾಗಿ ಯಾವ ಕ್ರಮ ಕೈಗೊಂಡಿದೆ?